ಖೆ / ವಿಷಯ : DEPARTMENT / SUBJECT: [illegible]

ತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 12/1/2021

ಕನ್ನಡಪ್ರಭ
ಸಂಪಾದಕೀಯ 12/1/21

# ಪುದುಚೇರಿ ಗೌರ್ನರ್, ಸಿಎಂ ಸಂಘರ್ಷಕ್ಕೆ ಕೊನೆ ಎಂದು?

ಜನರಿಂದ ಆಯ್ಕೆಯಾದ ಮುಖ್ಯಮಂತ್ರಿಯೇ ರಸ್ತೆಯಲ್ಲಿ ಪ್ರತಿಭಟನೆಗೆ ಕೂರುವಂತಹ ಅಪರೂಪದ ಸನ್ನಿವೇಶ ಈಗ ಪುದುಚೇರಿಯಲ್ಲಿ ನಿರ್ಮಾಣವಾಗಿದೆ. ದೂರು- ದುಮ್ಮಾನ ಹೊತ್ತು ತರುವ ಜನರ ಸಮಸ್ಯೆ ಆಲಿಸಿ, ಪ್ರತಿಭಟನೆ ಕೂರುವ ವಿವಿಧ ಜನಸಮುದಾಯಗಳನ್ನು ಮನವೊಲಿಸಿ ಆಡಳಿತ ನಡೆಸಬೇಕಾದ ಮುಖ್ಯಮಂತ್ರಿಗಳೇ ಪುದುಚೇರಿಯಲ್ಲಿ ಪ್ರತಿಭಟನೆಯಲ್ಲಿ ವ್ಯಸ್ತರಾಗಿರುವುದರಿಂದ ಈ ಬೆಳವಣಿಗೆ ಸಹಜವಾಗಿಯೇ ದೇಶದ ಗಮನ ಸೆಳೆದಿದ್ದೆ. ಪ್ರತಿಭಟನೆಗೆ ಇಳಿದಿರುವ ಮೊದಲ ಮುಖ್ಯಮಂತ್ರಿ ನಾರಾಯಣಸ್ವಾಮಿ ಏನಲ್ಲ; ಕೊನೆಯವರೂ ಅವರಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಗೆ ಅವಕಾಶವಿದೆ. ಆದರೆ ಅಧಿಕಾರಸ್ಥರೇ ಪ್ರತಿಭಟನೆಗೆ ಕೂರುವಂತಹ ಬೆಳವಣಿಗೆ ಸಂದಿಗ್ಧ ಪರಿಸ್ಥಿತಿಯನ್ನು ಸೃಷ್ಟಿಸುವುದರಲ್ಲಿ ಸಂಶಯವಿಲ್ಲ.

ಮಾಜಿ ಐಪಿಎಸ್ ಅಧಿಕಾರಿಯಾಗಿರುವ ಕಿರಣ್ ಬೇಡಿ ಅವರು 2016ರ ಮೇನಲ್ಲಿ ಪುದುಚೇರಿ ಉಪರಾಜ್ಯಪಾಲೆಯಾಗಿ ನೇಮಕಗೊಂಡರು. ಅಂದಿನಿಂದಲೇ ಮುಖ್ಯಮಂತ್ರಿ ಹಾಗೂ ಉಪರಾಜ್ಯಪಾಲರ ನಡುವಣ ಸಂಘರ್ಷ ಆರಂಭವಾಯಿತು. ಅದು ವಿಕೋಪಕ್ಕೆ ಹೋಗಿರುವುದರ ದ್ಯೋತಕವೇ ನಾರಾಯಣಸ್ವಾಮಿ ಅವರು ಸಂಪುಟ ಸಹೋದ್ಯೋಗಿಗಳೊಂದಿಗೆ ಬೀದಿಯಲ್ಲಿ ಕುಳಿತಿರುವ ಬೆಳವಣಿಗೆ. ಪರಿಪೂರ್ಣ ರಾಜ್ಯ ಸ್ಥಾನ ಹೊಂದಿರುವ ರಾಜ್ಯಗಳಿಗೂ, ಕೇಂದ್ರಾಡಳಿತ ಪ್ರದೇಶಗಳಿಗೂ ಸಾಕಷ್ಟು ವ್ಯತ್ಯಾಸವಿದೆ. ಸದ್ಯ ದೇಶದಲ್ಲಿ ಮುಖ್ಯಮಂತ್ರಿಗಳನ್ನು ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳು ಎರಡು. ಒಂದು ದೆಹಲಿ, ಮತ್ತೊಂದು ಪುದುಚೇರಿ. ವಿಶೇಷ ಎಂದರೆ, ಈ ಎರಡೂ ರಾಜ್ಯಗಳಲ್ಲೂ ಉಪರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳ ನಡುವೆ ಸಂಘರ್ಷ ನಡೆದುಕೊಂಡೇ ಬಂದಿದೆ.

**ಮುಖ್ಯಮಂತ್ರಿಯೇ ಬೀದಿಗೆ ಬಂದು ಕುಳಿತರೆ ರಾಜ್ಯದ ಕತೆಯೇನು? ಜನರ ಸಂಕಷ್ಟಗಳನ್ನು ಆಲಿಸುವವರಾರು?**

ಮುಖ್ಯಮಂತ್ರಿಯಾಗಿ ಜನರಿಂದ ಆಯ್ಕೆಯಾಗಿರುವ ತಮಗೆ ಅಧಿಕಾರ ಚಲಾಯಿಸಲು ಬಿಡುತ್ತಿಲ್ಲ ಎಂಬುದು ನಾರಾಯಣಸ್ವಾಮಿ ಅಳಲು. ತಮಗೂ ಅಧಿಕಾರವಿದೆ ಎಂಬುದು ಕಿರಣ್ ಬೇಡಿ ಅವರ ವಾದ. ಹೀಗಾಗಿ ಇಬ್ಬರ ನಡುವೆ ಕಳೆದ ನಾಲ್ಕು ವರ್ಷಗಳಿಂದಲೂ ವಾಕ್ಸಮರ ನಡೆದುಕೊಂಡೇ ಬಂದಿದೆ. ಕಿರಣ್ ಬೇಡಿ ಅವರನ್ನು ನಾರಾಯಣಸ್ವಾಮಿ ಬಿಜೆಪಿ ಏಜೆಂಟ್ ಎಂದು ಜರಿದ, ಅವರನ್ನು ವಾಪಸ್ ಕರೆಸಿಕೊಳ್ಳಿ ಎಂದು ರಾಷ್ಟ್ರಪತಿಗೆ ದೂರು ನೀಡಿದ ಬೆಳವಣಿಗೆಯೂ ನಡೆದಿದೆ. ಇಬ್ಬರ ನಡುವೆ ಕೊಂಚವೂ ಸಾಮರಸ್ಯ ಕಂಡುಬರುತ್ತಿಲ್ಲ. ವಿರಸ ದಿನೇದಿನೇ ಹೆಚ್ಚಾಗುತ್ತಿದೆ. ಏಪ್ರಿಲ್- ಮೇಗೆ ಪುದುಚೇರಿ ವಿಧಾನಸಭೆ ಚುನಾವಣೆ ನಿಗದಿಯಾಗಿರುವುದರಿಂದ ಇದಕ್ಕೆ ರಾಜಕೀಯವೂ ಸೇರಿಕೊಂಡಿದೆ.

ಇಂತಹದ್ದೇ ಪರಿಸ್ಥಿತಿ ಕಳೆದ ಕೆಲವು ವರ್ಷಗಳ ಹಿಂದೆ ದೆಹಲಿಯಲ್ಲಿ ನಿರ್ಮಾಣವಾಗಿತ್ತು. ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾದಾಗ 2014ರಲ್ಲಿ ಕೇಂದ್ರದ ವಿರುದ್ಧ ದೆಹಲಿಯ ರೈಲು ಭವನದ ಮುಂದೆ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದ್ದರು. 2018ರಲ್ಲಿ ರಾಜ್ಯಪಾಲರ ಮನೆಯಲ್ಲೇ ಮಲಗಿ ಪ್ರತಿಭಟನೆ ನಡೆಸಿದ್ದರು. ಈಗ ಮೂರನೇ ಬಾರಿಗೆ ಆಯ್ಕೆಯಾಗಿರುವ ಅವರು ಉಪರಾಜ್ಯಪಾಲರ ಜತೆ ಹೊಂದಾಣಿಕೆಯಿಂದ ಮುನ್ನಡೆಯುತ್ತಿದ್ದಾರೆ.

ಇಬ್ಬರು ನಾಯಕರ ನಡುವೆ ಹೊಂದಾಣಿಕೆ ಇಲ್ಲದಿದ್ದರೆ ಏನಾಗುತ್ತದೆ ಎಂಬುದಕ್ಕೆ ಈಗ ಪುದುಚೇರಿಯ ಬೆಳವಣಿಗೆಯೇ ನಿದರ್ಶನ. ಉಪರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳ ಕಾರ್ಯವೈಖರಿಗೆ ಸಂಬಂಧಿಸಿದಂತೆ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೊದಲಿನಿಂದಲೂ ಗೊಂದಲ ಇದೆ. ಮುಖ್ಯಮಂತ್ರಿ ಹಾಗೂ ಉಪರಾಜ್ಯಪಾಲರಾದ ವ್ಯಕ್ತಿ ಒಂದೇ ಪಕ್ಷದ ಮೂಲದವರಾಗಿದ್ದರೆ ಅದು ಸಮಸ್ಯೆಯಾಗುವುದಿಲ್ಲ. ದೆಹಲಿಯನ್ನು ಶೀಲಾ ದೀಕ್ಷಿತ್ ಅವರು 15 ವರ್ಷ ಆಳ್ವಿಕೆ ನಡೆಸಿದಾಗ ಅಲ್ಲಿ ಯವುದೇ ಸಮಸ್ಯೆ ಕಂಡುಬಂದಿರಲಿಲ್ಲ. ಪುದುಚೇರಿಯಲ್ಲೂ ಈ ಹಿಂದೆ ಸಮಸ್ಯೆ ಇರಲಿಲ್ಲ. ಯಾವಾಗ ಎರಡೂ ವಿಭಿನ್ನ ವಿಚಾರಧಾರೆಯ ವ್ಯಕ್ತಿಗಳು ಆಡಳಿತಕ್ಕೆ ಬರುತ್ತಾರೋ ಆಗ ಇಂತಹ ಸಂಘರ್ಷ ಸಹಜ. ಆದರೆ ಅದನ್ನೇ ದೊಡ್ಡದು ಮಾಡಿ ಪ್ರತಿಭಟನೆ ನಡೆಸುವಷ್ಟರ ಮಟ್ಟಿಗೆ ಹೋದರೆ, ಮುಖ್ಯಮಂತ್ರಿಯೇ ಬೀದಿಗೆ ಕುಳಿತರೆ ಆ ರಾಜ್ಯದ ಕತೆಯೇನು? ಜನರ ಸಂಕಷ್ಟಗಳನ್ನು ಆಲಿಸುವವರಾರು? ತಮಗಾಗುತ್ತಿರುವ ಅನ್ಯಾಯವನ್ನು ಹೇಳಿಕೊಳ್ಳಲು ನಾರಾಯಣಸ್ವಾಮಿ ಅವರಿಗೆ ಬದಲಿ ಮಾರ್ಗವಿದೆ. ಅವರು ಅದನ್ನು ಬಳಸಬೇಕಾದ ಅನಿವಾರ್ಯತೆ ಇದೆ. ಈ ವಿಷಯವಾಗಿ ಕಾಂಗ್ರೆಸ್ ಪಕ್ಷವಾದರೂ ನಾರಾಯಣಸ್ವಾಮಿ ಅವರಿಗೆ ತಿಳಿ ಹೇಳಬಹುದು.